ಇಷ್ಟವಾದ ಮೇಲಷ್ಟೇ 'ಮ್ಯಾಚ್' ಆಗಿ ಚಾಟಿಂಗ್ ಆರಂಭವಾಗುವುದು. ಆಮೇಲೆ ಭೇಟಿ. ಭೇಟಿಯಾದವರೂ ಸಂಬಂಧವನ್ನು ಮುಂದುವರಿಸಲೇಬೇಕು ಎಂದೇನಿಲ್ಲ. ಪ್ರತಿ ಹಂತದಲ್ಲಿಯೂ ಸಂಬಂಧವನ್ನು ಅಲ್ಲಿಗೇ ಮೊಟಕುಗೊಳಿಸಿ ತಮ್ಮ ಪಾಡಿಗೆ ತಾವು ಹೋಗುವ ಮುಕ್ತ ಅವಕಾಶ ಇಬ್ಬರಿಗೂ ಇರುತ್ತದೆ. ಈ ಮುಕ್ತ ವಾತಾವರಣವೇ ಡೇಟಿಂಗ್ ಆ್ಯಪ್‌ಗಳ ಜನಪ್ರಿಯತೆಗೆ ಇನ್ನೊಂದು ಕಾರಣ.

2010ರ ನಂತರ ಅಂತರ್ಜಾಲ ಬಳಕೆಯಲ್ಲಿ ಆದ ಏರಿಕೆ ಮತ್ತು ಸಾಮಾಜಿಕ ಜಾಲತಾಣಗಳ ಪಾರಮ್ಯವು ಸಮಾಜದಲ್ಲಿ ತಂದ ಬದಲಾವಣೆಗಳು ಹಲವು. ಮೊದಲು ಕೆಲವೇ ಮಹಾನಗರಗಳಲ್ಲಷ್ಟೇ ಇರುತ್ತಿದ್ದ 'ಮುಕ್ತ ಸಂಬಂಧ'ಕ್ಕೆ ಅಗತ್ಯವಾಗಿರುವ ವಾತಾವರಣ ಇಂದು ಅಂತರ್ಜಾಲದ ಮೂಲಕ ಪ್ರಾದೇಶಿಕ ಗಡಿಗಳನ್ನು ಮೀರಿ ಹರಡುತ್ತಿದೆ. ಮೊಬೈಲ್ ಮತ್ತು ಅಂತರ್ಜಾಲದ ಬಳಕೆ ದಿನೇದಿನೆ ಭಾರತದಲ್ಲಿ ಹೆಚ್ಚುತ್ತಿದೆ. ಸಂಬಂಧ, ಸೆಕ್ಸ್, ಪ್ರೀತಿ, ಇನ್ನಿತರ ವಿಷಯಗಳಲ್ಲಿ ಮುಕ್ತವಾಗಿ ಚಿಂತಿಸುವುದು, ಮಾತನಾಡುವುದು ಸಾಧ್ಯವಾಗುತ್ತಿದೆ. ಡೇಟಿಂಗ್ ಆ್ಯಪ್‌ಗಳೂ ಇಂಥ ಮಾತುಕತೆಗೆ ಬಹುಮುಖ್ಯವಾದ ವೇದಿಕೆಯನ್ನು ಕಲ್ಪಿಸಿಕೊಡುತ್ತಿವೆ. ಆನ್‌ಲೈನ್ ಡೇಟಿಂಗ್ ಆ್ಯಪ್‌ಗಳ ಮುಖ್ಯ ಉದ್ದೇಶವೇ ಅಪೇಕ್ಷಿತರಿಗೆ ಸಂಗಾತಿಯ ಆಯ್ಕೆ ನೀಡುವುದು ಮತ್ತು ಕಟ್ಟಳೆಗಳಿಲ್ಲದ ರೊಮಾನ್ಸ್ ಅಥವಾ ಸೆಕ್ಸ್‌ಗೆ ಅವಕಾಶ ಕಲ್ಪಿಸಿಕೊಡುವುದು.

### ಆನ್‌ಲೈನ್ ಡೇಟಿಂಗ್ ಇತಿಹಾಸ

ಆನ್‌ಲೈನ್ ಡೇಟಿಂಗ್ ಜಮಾನ ಆರಂಭವಾಗಿದ್ದು ಈಗೊಂದು ಇಪ್ಪತ್ತು ವರ್ಷಗಳ ಹಿಂದಷ್ಟೆ. ಈಗಲೂ ಸಮಾಜದ ಬಹುಪಾಲು ಜನರು ಪ್ರೇಮ–ಕಾಮ ಸಂಬಂಧಗಳನ್ನು ನೈತಿಕ–ಅನೈತಿಕ ಸ್ತರಗಳಲ್ಲಿ, ಭಾವನಾತ್ಮಕ ಪರಿಧಿಯಲ್ಲಿಯೇ ಗ್ರಹಿಸುತ್ತಾರೆ. ಆದರೆ ಇದೇ ಸಮಾಜದಲ್ಲಿ ಒಂದು ಪುಟ್ಟ ವರ್ಗವು ಅದಕ್ಕಿಂತ ಭಿನ್ನವಾಗಿ ಯೋಚಿಸುತ್ತಿದೆ ಮತ್ತು ಆ ವರ್ಗ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಹಾಗಾಗಿಯೇ ಫನ್ ಲವಿಂಗ್, ಎಕ್ಸೈಟ್‌ಮೆಂಟ್, ಸೆಕ್ಸ್ ಇವುಗಳ ಕುರಿತು ಮುಕ್ತ ಮಾತುಕತೆ ಸಾಧ್ಯವಾಗುತ್ತಿದೆ.

ಆದರೆ ಡೇಟಿಂಗ್ ಎಂಬ ಪರಿಕಲ್ಪನೆ ತೀರಾ ಹೊಸದೂ ಅಲ್ಲ. ಲೇಖನದ ಆರಂಭದಲ್ಲಿಯೇ ಉಲ್ಲೇಖಿಸಿರುವ ಹಾಗೆ ಬೇರೆ ಬೇರೆ ರೂಪಗಳಲ್ಲಿ ಡೇಟಿಂಗ್ ಪರಿಕಲ್ಪನೆ ಹಿಂದೆಯೂ ಚಾಲ್ತಿಯಲ್ಲಿತ್ತು.

ಮುದ್ರಣ ಮಾಧ್ಯಮ ಬಳಸಿ ಸಂಗಾತಿ ಹುಡುಕಾಡುವುದು ಯೂರೋಪ್‌ನಲ್ಲಿ ಪತ್ರಿಕೆಗಳ ಮೂಲಕ ಆರಂಭವಾಯಿತು. 1695ರಲ್ಲಿ ವೈಯಕ್ತಿಕ ಜಾಹೀರಾತುಗಳು ಆರಂಭವಾಗಿದ್ದವು ಎಂದು ಎಚ್.ಜಿ. ಕಾಕ್ಸ್ ಹೇಳುತ್ತಾರೆ. ಆದರೆ ಅದರ ದಾಖಲೆ ಸಿಗುವುದು 18ನೇ ಶತಮಾನದಲ್ಲಿ. ಇಂಗ್ಲೆಂಡಿನಲ್ಲಿ 'ಮ್ಯಾಂಚೆಸ್ಟರ್ ವೀಕ್ಲಿ'ಯಲ್ಲಿ ಮೊದಲ ಬಾರಿಗೆ ಹೆಲೆನ್ ಮಾರಿಸಾನ್ ಎಂಬ ಮಹಿಳೆ ಸಂಗಾತಿಗಾಗಿ ಜಾಹೀರಾತನ್ನು 'ಲೋನ್ಲಿ ಹಾರ್ಟ್ ಕಾಲಂ'ನಲ್ಲಿ ಪ್ರಕಟಿಸಿದ್ದಳು. ಆಗ (1727ರಲ್ಲಿ) ಇಂಗ್ಲೆಂಡ್ ಸರ್ಕಾರ ಇದನ್ನು 'ಮಾನಸಿಕ ಅಸ್ವಸ್ಥತೆ' ಎಂದು ಕರೆದು ನಾಲ್ಕು ವಾರಗಳ ಕಾಲ ಆಕೆಯನ್ನು ಸರ್ಕಾರಿ ಆಶ್ರಮಕ್ಕೆ ಕಳುಹಿಸಿತ್ತು. ಈ ರೀತಿ ಸಂಗಾತಿಗಾಗಿ ಸಾರ್ವಜನಿಕ ಪ್ರಕಟಣೆ ನೀಡುವುದು ಸರ್ಕಾರಕ್ಕೆ ಒಪ್ಪಿತವಾಗಿರಲಿಲ್ಲ.

ಈ ಮೊದಲು 1,700ರಲ್ಲಿ ಸಲಿಂಗ ಪ್ರೇಮಿಗಳು ತಮ್ಮ ಸಂಗಾತಿಯನ್ನು ಹುಡುಕಲು ದಿನಪತ್ರಿಕೆಗಳನ್ನು ಬಳಸುತ್ತಿದ್ದರು. ಆದರೆ ಯುನೈಟೆಡ್ ಕಿಂಗ್‌ಡಮ್ ರಾಜಪ್ರಭುತ್ವ ಸಲಿಂಗ ಪ್ರೇಮಿಗಳಿಗೆ ನಿಷೇಧ ಹೇರಿತು. ಆ ನಿರ್ಬಂಧ 1967ರವರೆಗೆ ಮುಂದುವರೆಯಿತು. ಸಲಿಂಗ ಪ್ರೇಮಿಗಳು ಸೇರುವ 'ಮಾಲಿ ಹೌಸ್'ಗಳ ಮೇಲೆ ಪೊಲೀಸ್ ರೈಡ್ ಮಾಡುತ್ತಿದ್ದರು. ಆನಂತರ ಸಲಿಂಗಿಗಳು ಅಮೆರಿಕ ಮತ್ತು ಇಂಗ್ಲೆಂಡ್‌ನಲ್ಲಿ ಕೋಡ್‌ವರ್ಡ್ ಮತ್ತು ಹೆಣ್ಣಿನ ಹೆಸರನ್ನು ಬಳಸಿ ಸರ್ಕಾರಕ್ಕೆ ತಿಳಿಯದಂತೆ ಸಂಬಂಧ ಬೆಳೆಸುತ್ತಿದ್ದರು.

ಮನೆಯನ್ನು ಬಿಟ್ಟು ಯುದ್ಧಕ್ಕಾಗಿ ಹೋಗುತ್ತಿದ್ದ ಸೈನಿಕರು ಕೂಡ ಪತ್ರಿಕೆಗಳನ್ನು ಪ್ರೇಮಸಂದೇಶ ತಲುಪಿಸಲು ಬಳಸುತ್ತಿದ್ದರು. ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಮನೆಯಿದ್ದ ದೂರವಿದ್ದ ಒಂಟಿ ಸೈನಿಕರು ಸ್ನೇಹಿತರಿಗೆ ಸಂದೇಶ ನೀಡುವುದು, ಪೆನ್ ಪಾಲ್ (ಪತ್ರ ಮೈತ್ರಿ) ಮಾಡುವಂತೆ ಕೇಳುವುದು ಟ್ರೆಂಡ್‌ನಂತಾಗಿತ್ತು. ಆ ನಂತರ 1960ರಲ್ಲಿ ಜಾಹೀರಾತುಗಳನ್ನು ಪೊಲೀಸರು ಸಲಿಂಗ ಪ್ರೇಮಿಗಳ, ಎಸ್ಕಾರ್ಟ್, ಅಪರಾಧಿಗಳ, ಸೆಕ್ಸ್ ವರ್ಕರ್‌ಗಳ ಜಾಹೀರಾತುಗಳು ಎಂದು ಶಂಕಿಸಿ ಜಾಹೀರಾತು

ನಾನು 'ಗೇ'. ಹುಡುಗಿಯ ರೀತಿಯಲ್ಲಿ ಹಾವ ಭಾವ ಇರುವುದರಿಂದ ಎಲ್ಲರಿಗೂ ನನ್ನ ಕುರಿತು ಹೇಳಿಕೊಳ್ಳದಿದ್ದರೂ ಅನುಮಾನ ಬರುತ್ತದೆ. ಕಾಲೇಜು ದಿನಗಳಲ್ಲಿ ಗೆಳೆಯನೊಂದಿಗೆ ಸಂಬಂಧವಿತ್ತು. ಆತ ಬೈಸೆಕ್ಷುವಲ್ ಆಗಿದ್ದ ಕಾರಣ ಮದುವೆಯಾದ. ಈಗ ಡೇಟಿಂಗ್ ಆ್ಯಪ್ ಬಗ್ಗೆ ತಿಳಿದಿದೆ, ಆದರೆ ಬಳಸುವುದಿಲ್ಲ. ಫೇಸ್‌ಬುಕ್‌ನಲ್ಲಿ ಹುಡುಗಿಯ ಪ್ರೊಫೈಲ್ ಇದೆ. ಅಲ್ಲಿ ಹುಡುಗರ ಜೊತೆ ಚಾಟ್ ಮಾಡುತ್ತೇನೆ.

**–ಉದ್ಧವ್**, ಕೆಮಿಸ್ಟ್

